**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.10/2020

**PW**. 3

**CW**. 4

**ಸಾಕ್ಷಿಯ ಹೆಸರು –ಲೋಕೇಶ**

**ತಂದೆಯ ಹೆಸರು –ಮಲ್ಲಾರಾಧ್ಯ**

**ವಯಸ್ಸು –55 ವರ್ಷಗಳು**

ದಿನಾಂಕ 08–12–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಕೂಲಿ ಕೆಲಸ**

**ವಾಸಸ್ಥಳ –ದಳ್ಳಾಲು , ಬಿಳಿಕೆರೆ, ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಈಗ್ಗೆ 10 ವರ್ಷಗಳ ಹಿಂದೆ ಮನುಗನಹಳ್ಳಿ ಗ್ರಾಮದ ಗಣಪತಿ ದೇವಸ್ಥಾನದ ಮುಂಭಾಗ ಅರಳಿ ಮರದ ಬಳಿ ಒಂದು ಅಪರಿಚಿತ ಗಂಡಸಿನ ಶವ ಬಿದ್ದಿದ್ದು, ಆತನ ಮೈ ಮೇಲೆ ಟೀಶರ್ಟ ಮತ್ತು ಪ್ಯಾಂಟ್ ಇತ್ತು. ನಮ್ಮ ಊರಿನ ಜನರು ಸ್ಥಳದಲ್ಲಿ ಸೇರಿದ್ದರು. ನಂತರ ಪೋಲಿಸರು ಸ್ಥಳಕ್ಕೆ ಬಂದು ಶವವನ್ನು ಮುಂದಿನ ಕ್ರಮಕ್ಕಾಗಿ ಮೈಸೂರು ಆಸ್ಪತ್ರೆಗೆ ಸಾಗಿಸಿದರು. ನನ್ನನ್ನು, ಚಾಸಾ–3 ಮತ್ತು 5 ರವರನ್ನು ಸದರಿ ಮೃತದೇಹದ ಶವ ಪಂಚನಾಮೆ ಮಾಡಲು ಕರೆದುಕೊಂಡು ಹೋಗಿದ್ದು, ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ಬೆಳಗ್ಗೆ 8.30 ರಿಂದ 10.30 ವರೆಗೆ ಅಪರಿಚಿತ ವ್ಯಕ್ತಿಯ ಶವ ಪಂಚನಾಮೆ ಮಾಡಿ, ನನ್ನ, ಚಾಸಾ–3 ಮತ್ತು 5 ರವರು ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಿದ್ದು ,ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಶವದ ಮೇಲೆ ಯಾವುದೇ

ಗಾಯದ ಗುರುತುಗಳು ಇರಲಿಲ್ಲ. ಸದರಿ ವ್ಯಕ್ತಿ ಕೊಲೆ ಆಗಿ ಮೃತಪಟ್ಟಿದ್ದಾನೆ ಎಂದು ಪೊಲೀಸರಿಂದ ಗೊತ್ತಾಯಿತು.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ–**

ನಿಪಿ–3 ರಲ್ಲಿ ಬೆರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ . ನಿಪಿ–3 ಅನ್ನು ಪೊಲೀಸರು ಬರೆದಿದ್ದು, ನಾನು ಸಹಿ ಮಾಡಿದ್ದೇನೆ ಎಂದರೆ ಸರಿ . ನನ್ನ ಸಮಕ್ಷಮ ಶವ ಪಂಚನಾಮೆ ಮಾಡಿದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.